Email: kalosmifoundation@gmail.com Website: www.kalosmifoundation.com

# ಪಶ್ಚಿಮ ಘಟ್ಟದ ಕೂಗು ಮನಮುಟ್ಟುವುದು ಯಾವಾಗ............?

ಪಶ್ಚಿಮ ಘಟ್ಟಗಳು ಭಾರತದ ವಾತಾವರಣವನ್ನು ಹದ್ದುಬಸ್ತಿನಲ್ಲಿಡಲು ಬಹಳ ಮುಖ್ಯ ಪಾತ್ರ ವಹಿಸುತ್ತಾ ಬಂದಿದೆ. ಆದರೆ ಈ ನಡುವೆ ನಡಿಯುತ್ತಿರುವ ಅತಿರೇಖದ (So called Development) ಅಭಿವೃಧ್ಧಿ ಕಾರ್ಯಗಳಿಂದಾಗಿ ಕಳೆದ 20-25 ವರ್ಷಗಳಿಂದ ಪಶ್ಚಿಮ ಘಟ್ಟಗಳು ತನ್ನಲ್ಲಿರುವ ವಾತಾವರಣವನ್ನು ಸಮತೋಲನದಲ್ಲಿ ಇಡಲಾಗುತ್ತಿಲ್ಲ. ಇಂತಹ ಸಂದ್ಗಿದ ಪರಿಸ್ಥಿತಿಯಲ್ಲಿ ಅವುಗಳ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಹೊಣೆಯಾಗಿದೆ,

ಎಲ್ಲರಿಗೂ ತಿಳಿದಂತೆ ಮಾಧವ್ ಗಾಡ್ಗಿಲ್ಲರ ವರದಿಯಲ್ಲಿ 1,29,037 ಚ.ಕಿಮಿ ಪಶ್ಚಿಮ ಘಟ್ಟ ಪ್ರದೇಶವನ್ನು ಮೂರು ವಲಯಗಳಾಗಿ ವಿಂಗಡಣೆ ಮಾಡಿರುತ್ತಾರೆ(Ecological Sensitive Zone-1,2,3). ಅದು ಕೂಡ ಹಲವಾರು ದಿನಗಳ ಪರಿಶ್ರಮ, ಹಳ್ಳಿಗಳಲ್ಲಿನಡೆಸಿದ ವಾಸ್ತವಿಕ ವರದಿಗಳನ್ನು ಒಳಗೊಂಡಿದೆ. ಇಂತಹ ವರದಿಯನ್ನು ಜನಮಾನಸಕ್ಕೆ ತಲುಪಲು ಬಿಡದೆ ಸರ್ವಾಧಿಕಾರಿಯಂತೆ ಕೇವಲ ಋಣಾತ್ಮಕ ಚಿಂತನೆಗಳನ್ನು ವಿಶ್ಲೇಷಿಸಿ 522 ಪುಟಗಳ ಧೈತ್ಯ ವರದಿಯನ್ನು ಕಸದ ಬುಟ್ಟಿಗೆ ಎಸೆಯುತ್ತಾರೆ.

ಅದು ಬಿಡಿ 2013ರಲ್ಲಿ ಕಸ್ತೂರಿ ರಂಗನ್ ರವರ ವರದಿಯನ್ನು ಪರಿಸರ ಸಚಿವಾಲಯಕ್ಕೆ ಸಲ್ಲಿಸುತ್ತಾರೆ. ವರದಿಯಲ್ಲಿ ಮುಖ್ಯವಾಗಿ Ecological Sensitive Zone ಅಷ್ಟೆ, ಅದು ಕೇವಲ ಸುಮಾರು 60,000 ಚ.ಕಿಮಿ ವ್ಯಾಪ್ತಿಯನ್ನು ಒಳಗೊಂಡಿದೆ ಮಾಧವ್ ಗಾಡ್ಗಿಲ್ಲರ ವರದಿಯ ಪ್ರದೇಶ ಸುಮಾರು 77,000 ಚ. ಕಿಮಿ. ಒಳಗೊಂಡಿತ್ತು, ಕಸ್ತೂರಿ ರಂಗನ್‌ರ ವರದಿಯಲ್ಲಿ 17,000 ಚ.ಕಿಮಿ. ಪ್ರದೇಶಕ್ಕೆ ಕೆಲವು ಜನರ (ದುರ್)ಆಸೆಯಂತೆ ವಿನಾಯಿತಿ ನೀಡಿರುತ್ತಾರೆ. ಆದರು ಇದನ್ನು ಸಹ ನಮ್ಮ ಆಡಳಿತ ಸರ್ಕಾರ ಜನರ ಮಧ್ಯೆ ಅದರ ಸಾದಕಬಾದಕಗಳನ್ನು ಚರ್ಚಿಸದೆ ಕೇವಲ ತಮ್ಮ ಚುನಾಯಿತ ಪ್ರತಿನಿಧಿಗಳ ಕೈಗೊಂಬೆಯಂತೆ ತಿರಸ್ಕರಿಸಲು ನಿರ್ಧರಿಸಿರುತ್ತಾರೆ.

**ಸಂಪೂರ್ಣ ವರದಿಯನ್ನು ಏಕೆ ತಿರಸ್ಕರಿಸಬೇಕು ?**

ಹೌದು ಕೆಲವು ವಿಚಾರಗಳಲ್ಲಿ ಕೆಲವರಲ್ಲಿ ವ್ಯತ್ಯಾಸದ ಅಭಿಪ್ರಾಯ ಇರಬಹುದು, ಅದನ್ನು ಚರ್ಚಿಸಿ ಸರಿಪಡಿಸಿಕೊಂಡು ವರದಿಯನ್ನು ಅನುಷ್ಠಾನಗೊಳಿಸದೆ ಸುಮ್ಮನೆ ನಾಟಕೀಯವಾಗಿ ಸಂಪೂರ್ಣ ವರದಿಯನ್ನು ತಿರಸ್ಕರಿಸುವುದು ಎಷ್ಟು ಸರಿ.

ಇಷ್ಟೆಲ್ಲದರಲ್ಲು ನಮ್ಮ ಅಭಿಪ್ರಾಯದಲ್ಲಿ ಸಂಪೂರ್ಣವಾಗಿ ವಾಸ್ತವತೆ ಚಿತ್ರಿಸಿರುವ ಪರಿಸರ ತಜ್ಞ ಮಾಧವ್ ಗಾಡ್ಗಿಲ್ಲರ ವರದಿಯ ಅನುಷ್ಠಾನ ಬಹು ಮುಖ್ಯ, ಆದರೆ ಸದ್ಯದ ಪರಿಸ್ಥಿತಿಯಲ್ಲಿ ಭಾರತ ಸರ್ಕಾರದ ಕರಡು ಪ್ರಸ್ತಾವನೆಯಂತೆ ಸುಮಾರು 56000 ಚ.ಕಿಮಿ. ಪ್ರದೇಶವನ್ನು ಪರಿಸರ ಸೂಕ್ಷ್ಮವಲಯವೆಂದು(ESZ) ಘೋಷಿಸುವುದು ಬಹಳ ತುರ್ತಿನ ಕೆಲಸ.

ಸರ್ಕಾರದ ಪ್ರತಿಯೊಂದು ನಿರ್ಧಾರ ಅದು ಜನರ ನಿರ್ಧಾರ, ಆದರೆ ಇಂತಹ ಸೂಕ್ಷ್ಮ ವಿಷಯಗಳಲ್ಲಾದರು ಜನರು ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸಿ ಪಶ್ಚಿಮ ಘಟ್ಟಗಳ ರಕ್ಷಣೆಗೆ ಮುಂದಾಗಬೇಕಿರುವುದು ಪ್ರತಿಯೊಬ್ಬ ಪ್ರಜೆಯ ಕಾನೂನು ಬದ್ದ (Article 51A-g) ಕರ್ತವ್ಯವೆಂದು ಈ ಮೂಲಕ ತಿಳಿಯಪಡಿಸುತ್ತಿದ್ದೇವೆ.

"ಭಾರತ ಸರ್ಕಾರ ತಾನು ಹೊರಡಿಸುವ ಪ್ರತಿಯೊಂದು ಅಧಿಸೂಚನೆಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಹೊರಡಿಸುವುದು ಅತಿ ಮುಖ್ಯ ಮತ್ತು ಕರ್ತವ್ಯ ಕೂಡ".

ನಿಮ್ಮ,

**ಕಾಲೋಸ್ಮಿ ಫೌಂಡೇಷನ್**